## ಬೌದ್ಧಿಕ ದಿವಾಳಿತನ

ಚಿತ್ರ ನಟರಾದ ಯಶ್ ಹಾಗೂ ರಾಧಿಕಾ ಪಂಡಿತ್ ಇತ್ತೀಚೆಗೆ ಗೋವಾದಲ್ಲಿ ನಿಶ್ಚಿತಾರ್ಥ ಮಾಡಿಕೊಂಡರು. ಇದು ಆ ಎರಡು ಕುಟುಂಬಗಳ, ಕೆಲವು ಅಭಿಮಾನಿಗಳ ಹಾಗೂ ಆ ರಂಗಕ್ಕೆ ಸಂಬಂಧಪಟ್ಟವರ ಖಾಸಗಿ ವಿಷಯ. ಆದರೆ ಕನ್ನಡದ ಎಲ್ಲಾ ಸುದ್ದಿ ವಾಹಿನಿಗಳೂ ಪೈಪೋಟಿಗೆ ಬಿದ್ದಂತೆ ಅದನ್ನು ವೈಭವೀಕರಿಸಿದ ರೀತಿ ಅಸಹ್ಯ ಹುಟ್ಟಿಸುವಂತಿತ್ತು.

—ಬಿಲ್ಲೇಶ್ವರ ಅಚ್ಚು, ಹುಂಚ

## ಅಭಿನಂದನೆಗಳು

ಪ್ರಸ್ತುತ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ದಿ. ನಿರಂಜನರ ಕಾದಂಬರಿ 'ಚಿರಸ್ಮರಣೆ' ಮೂಲಕ್ಕೆ ಧಕ್ಕೆ ಬಾರದ ರೀತಿ ತಯಾರಿಸಲಾಗಿದೆ. ನೋಡಿ ತುಂಬಾ ಮುದವೆನಿಸಿತು. ದಿ. ಶಾಂತಿನಾಥ ದೇಸಾಯಿ ಅವರ 'ಓಂ ಣಮೋ' ಕೂಡ ಮನಸೆಳೆಯಿತು.

—ಶಾಂತಸರೋಜಿನಿ, ಚಿಕ್ಕಮಗಳೂರು

## ದಬ್ಬಾಳಿಕೆ ಖಂಡನೀಯ

'ಗಂಗಾ' ಧಾರಾವಾಹಿ ಝೀ ಟಿ ವಿ ಯಲ್ಲಿ ಪ್ರಸಾರವಾಗುತ್ತಿದ್ದು ಅದರಲ್ಲಿರುವ ಎಲ್ಲಾ ಪಾತ್ರಧಾರಿಗಳು ಚೆನ್ನಾಗಿ ಅಭಿನಯಿಸುತ್ತಿದ್ದಾರೆ. ಅತ್ತೆಯಾಗಿ, ಮಡಿ ಹೆಣ್ಣು ಮಗಳ ಪಾತ್ರಧಾರಿ ಅಜ್ಜಿ ಮನೆಯಲ್ಲಿ ಎಲ್ಲರನ್ನೂ ನಡೆಸಿಕೊಳ್ಳುವ ರೀತಿ ಈಗಿನ ಕಾಲಕ್ಕೆ ತಕ್ಕದ್ದಲ್ಲ. 25 ವರ್ಷಗಳ ಹಿಂದೆಯೇ ಸೊಸೆಯನ್ನು ನಡೆಸಿಕೊಳ್ಳುವ ಕಾಲ ಮುಗಿದು ಹೋಗಿದ್ದು, ಆಗಲೂ ಅಲ್ಲೊಬ್ಬ ಇಲ್ಲೊಬ್ಬ ಅತ್ತೆ ಹಾಗೆ ಇದ್ದರು. ಆಗ ಅತ್ತೆಯ ದಬ್ಬಾಳಿಕೆಗೆ ಎದುರು ಉತ್ತರ ಕೊಡದ, ಜಗಳವಾಡದ ಸೊಸೆಯ ಪರವಾಗಿ 'ಅತ್ತೆಗೊಂದು ಕಾಲ ಸೊಸೆಗೊಂದು ಕಾಲ' ಎಂಬ ಮಾತಿತ್ತು. ಪರಿವರ್ತನೆ ಜಗದ ನಿಯಮ ಎನ್ನುವಂತೆ ಸೊಸೆಯೂ ಇಂದು ಅನೇಕ ಮನೆಗಳಲ್ಲಿ ಕೆಟ್ಟವಳಾಗಿದ್ದು ಗಾದೆಯೂ ಬದಲಾಗಿದೆ. 'ಸೊಸೆಗೊಂದು ಕಾಲ, ಸೊಸೆ ಅತ್ತೆಯಾದಾಗ ಒಂದು ಕಾಲ' ಎಂದು. 'ಗಂಗಾ' ಧಾರಾವಾಹಿಯ ದಬ್ಬಾಳಿಕೆ ಮಾಡುವ ಅತ್ತೆ (ಅಜ್ಜಿ) ಯನ್ನು ತೋರಿಸದೆ ಹೊಂದಿಕೊಂಡು ಹೋಗುವುದನ್ನು ತೋರಿಸಿ. ದಬ್ಬಾಳಿಕೆ ಯಾವ ಕಾಲಕ್ಕೂ ಅಪ್ರಸ್ತುತ, ಖಂಡನೀಯ.

—ಜಯತೀರ್ಥ ಶರ್ಮಾ, ಕಲ್ಬುರ್ಗಿ

**ವಾರದ ಪತ್ರ**

## ಸುದ್ದಿಗೆ ಪ್ರಬುದ್ಧತೆ ಇರಲಿ

ದೃಶ್ಯ ಮಾಧ್ಯಮ ಅತಿ ಪ್ರಭಾವಿ. ಇಂತಹ ಮಾಧ್ಯಮಗಳ ಬಳಕೆಯಲ್ಲಿ ಜಾಣತನ ಬೇಕು. ಸಂಯಮ ಬೇಕು. ಸದಭಿರುಚಿ ಬೇಕು. ಸುದ್ದಿ ಆಯ್ಕೆ ಮತ್ತು ಪ್ರಕಟಣೆಯಲ್ಲಿ ಅಕ್ಷರ ಮಾಧ್ಯಮ ಒಂದು ಮಾದರಿ. ಇದರಿಂದಾಗಿಯೇ ಅನೇಕ ಪತ್ರಿಕೆಗಳು ಬಹುಕಾಲದಿಂದ ಆಕರ್ಷಣೆಯನ್ನು ಉಳಿಸಿಕೊಂಡಿವೆ. ವಿಶ್ವಾಸಾರ್ಹವಾಗಿವೆ. ಬೆಳಬೆಳಗ್ಗೆ ಸ್ವಾಗತಾರ್ಹ ಅತಿಥಿಗಳಾಗಿವೆ. ಆದರೆ ದೃಶ್ಯ ಮಾಧ್ಯಮ? ಒಂದು ಕೊಲೆಯನ್ನು ದಿನವಿಡೀ ತೋರಿಸುವುದು ವಾಕರಿಕೆ ಹುಟ್ಟಿಸುತ್ತದೆ.

ಇತ್ತೀಚೆಗೆ ನಡೆದ ಯಶ್ ಮತ್ತು ರಾಧಿಕಾ ನಿಶ್ಚಿತಾರ್ಥ ಆ ಯುವ ಜೋಡಿಯ ಸುಮಧುರ ಕ್ಷಣ. ಎಷ್ಟು ಸ್ಥಳ ಕೊಡಬೇಕೋ ಅಷ್ಟನ್ನು ಪತ್ರಿಕೆ ಕೊಟ್ಟಿವೆ. ಆದರೆ ನಮ್ಮ ದೃಶ್ಯ ಮಾಧ್ಯಮ ಮಾತ್ರ ಆ ಯುವ ಜೋಡಿಯ ಜಾತಕವನ್ನೇ ಜಾಲಾಡಿ ಎಲ್ಲವನ್ನೂ ಬಿಚ್ಚಿ ತೋರಿಸುವ ಹುಚ್ಚಿಗೆ ಕೈಹಾಕಿದ್ದು ಬಾಲಿಶವಾಗಿದೆ. ಪ್ರಸಿದ್ಧ ನಟರ ದಾಂಪತ್ಯ ಬಿರುಕು, ಕೋರ್ಟ್ ಎಲ್ಲವನ್ನು ತೋರಿಸಿ ಕಿರಿಕಿರಿ ಉಂಟು ಮಾಡಲಾಗಿತ್ತು. ಈಗ ನಿಶ್ಚಿತಾರ್ಥವೇ? ಅದನ್ನು ರೋಚಕ ಸುದ್ದಿಯಾಗಿ ಬಿತ್ತರಿಸಿದ್ದು ಅತಿಯಾಯ್ತು. ಸುದ್ದಿಗೇನು ಬರ? ಬೇಕಾದಷ್ಟಿವೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪ್ರಸಂಗಗಳಿವೆ. ಇವುಗಳನ್ನು ಆಯ್ದು ತೋರಿಸಲಿ.

—ಸತ್ಯಬೋಧ, ಬೆಂಗಳೂರು

## ಜನಹಿತ ಕಾರ್ಯ

ಪಬ್ಲಿಕ್ ಟಿವಿಯ ಪಬ್ಲಿಕ್ ಹೀರೋ, ಬೆಳಕು ಹಾಗೂ ಟಿ. ವಿ. 9 ನಲ್ಲಿ ಬರುವ 'ನಿಮಗೊಂದು ಸಲಾಂ' ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಸಾಧನೆ ಮಾಡಿದವರನ್ನು, ಉತ್ತಮ ಕೆಲಸ ಮಾಡಿದವರನ್ನು ಗುರುತಿಸಿ, ಪ್ರೋತ್ಸಾಹಿಸುತ್ತವೆ. ಮತ್ತಷ್ಟು ಸಾಧಕರು ಇದರಿಂದ ಪ್ರೇರಣೆ ಪಡೆದು, ಸಮಾಜೋಪಯೋಗಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ನೆರವಾಗುತ್ತದೆ. ಕಷ್ಟದಲ್ಲಿದ್ದವರಿಗೆ, ಬದುಕಿನಲ್ಲಿ ಭರವಸೆ ಕಳೆದುಕೊಂಡವರಿಗೆ ಸಾಂತ್ವನ ನೀಡುವ, ಆ ಮೂಲಕ ಸಹಾಯ ಹಸ್ತ ಚಾಚುವ ಇಂತಹ ಕಾರ್ಯಕ್ರಮಗಳು ನಿಜಕ್ಕೂ ಉತ್ತಮ ಸಮಾಜ ನಿರ್ಮಾಣದಲ್ಲಿ ಸಹಕಾರಿಯಾಗಬಲ್ಲವು.

—ಎಂ.ಜಿ.ರಾಮಚಂದ್ರ, ಮಂಡಗಳಲೆ

## ಸುಂದರ ಸರಳ ಜೀವನ

ಇತ್ತೀಚೆಗೆ ಆರಂಭವಾದ ಕಿರುತೆರೆ ವಾಹಿನಿ 'ಸರಳ ಜೀವನ' ನಿಜಕ್ಕೂ ಸ್ಫೂರ್ತಿದಾಯಕ. ಮಕ್ಕಳಿಗಾಗಿ 'ಅಜ್ಜಿ ಹೇಳಿದ ಕಥೆಗಳು', ಯುವಜನತೆಗಾಗಿ 'ಇಷ್ಟೇ ಗುರು', ಮಹಿಳೆಯರಿಗಾಗಿ 'ಭಕ್ತಿಗೀತೆ', 'ಜನಪದ ಗೀತೆ'ಗಳ 'ಜ್ಞಾನಪದ', ಮನೆಮಂದಿಗೆಲ್ಲಾ ಇಷ್ಟವಾಗುವ 'ಭಾವಗೀತೆ' ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು, ಹಿರಿಯ ನಾಗರಿಕರಿಗಾಗಿ 'ಪುಣ್ಯಕ್ಷೇತ್ರ'ದರ್ಶನ ವಾಹ್! ನಿಜಕ್ಕೂ ಸುಂದರ ಸರಳ ಜೀವನ.

ಅತ್ತೆ ಸೊಸೆ ಜಗಳ, ಒಬ್ಬನಿಗೆ ಎರಡು ಹೆಣ್ಣು, ಒಬ್ಬಳಿಗೆ ಮೂರು ಗಂಡು, ಕಿಡ್‌ನ್ಯಾಪ್, ಪೊಲೀಸ್ ದೌರ್ಜನ್ಯ, ವಾಮಾಚಾರ, ರಾಜಕೀಯ ಹುಚ್ಚಾಟಗಳನ್ನು ಮೇಲಾಟವಾಗಿಸಿಕೊಂಡು ಜನಮಾನಸವನ್ನು ಹತ್ತೈಗೈಯುತ್ತಿರುವ ಇಂದಿನ ಹತ್ತು ಹಲವು ವಾಹಿನಿಗಳ ನಡುವೆ 'ಸರಳ ಜೀವನ' ವೀಕ್ಷಕರ ಅಂತಃಶಕ್ತಿಯನ್ನು ಉದ್ದೀಪನಗೊಳಿಸುತ್ತದೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಕನ್ನಡ ಮರೆತ ಮೇಷ್ಟ್ರು

ಒಳ್ಳೆಯ ಕಾರ್ಯಕ್ರಮಕ್ಕೆ ಆಯುಷ್ಯ ಕಡಿಮೆಯೇನೋ ಎಂಬಂತೆ ದಿನದಿಂದ ದಿನಕ್ಕೆ ಹೆಚ್ಚೆಚ್ಚು ಜನಪ್ರಿಯವಾಗುತ್ತಿದ್ದ 'ಡ್ರಾಮಾ ಜೂನಿಯರ್ಸ್' ಇನ್ನು ಮೂರೇ ವಾರದಲ್ಲಿ ಮುಕ್ತಾಯವಾಗಲಿದೆ ಎಂದು ತಿಳಿದು ತುಂಬ ಬೇಸರವಾಯಿತು. ಈ ಕಾರ್ಯಕ್ರಮ ವೀಕ್ಷಕರಿಗೆ ಬರೀ ಮನರಂಜನೆಯನ್ನಷ್ಟೇ ನೀಡದೆ ನೇಕಾರರ ಬವಣೆ, ಹೆಣ್ಣು ಶಿಶುಗಳ ಭ್ರೂಣಹತ್ಯೆ, ಧೂಮಪಾನದ ಅಪಾಯ, ರೈತರ ಆತ್ಮಹತ್ಯೆ, ಕನ್ನಡ ಶಾಲೆಗಳ ದುಸ್ಥಿತಿ, ವೃದ್ಧರ ಬವಣೆ ಮುಂತಾದ ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದೆ. ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡಿದೆ. ಇದು ಭಾರತದ ಟಿ.ವಿ. ಇತಿಹಾಸದಲ್ಲಿಯೇ ಒಂದು ನೂತನ ಪ್ರಯೋಗ ಎಂದು ಹೇಳಬಹುದು.

ಆದರೆ, ತೀರ್ಪುಗಾರರಾದ ಮೇಷ್ಟ್ರು ಟಿ.ಎನ್.ಸೀತಾರಾಂ, ನಟ ವಿಜಯ ರಾಘವೇಂದ್ರ ಆಗಾಗ ಮಕ್ಕಳಿಗೆ ನಟನೆ ಹೇಳಿಕೊಟ್ಟವರನ್ನು ವೇದಿಕೆಗೆ ಕರೆಯುವಾಗ, 'ಮೆಂಟರ್‌ನ ಕರೀರಪ್ಪಾ' ಎಂದರೆ ನೋಡುಗರಿಗೆ ತುಂಬಾ ಕಿರಿಕಿರಿಯೆನಿಸುತ್ತದೆ. ಮೆಂಟರ್ ಬದಲಿಗೆ ಮಾರ್ಗದರ್ಶಕ/ ನಿರ್ದೇಶಕ/ ಗುರು— ಇತ್ಯಾದಿ ಉತ್ತಮ ಕನ್ನಡ ಪದಗಳನ್ನು ಬಳಸಿದರೆ ಮಕ್ಕಳೂ ಕನ್ನಡ ಹೆಚ್ಚು ಬಳಸಲು ಪ್ರೋತ್ಸಾಹ ನೀಡಿದಂತಾಗುತ್ತದೆ.

—ಇಂದು, ತಿಪಟೂರು, ಮುರಲೀಧರ ಕುಲಕರ್ಣಿ, ಬೀದರ್

## ಸಮಾಜಕ್ಕೆ ತಪ್ಪು ಸಂದೇಶ

ಪುಟ್ಟ ಗೌರಿಯ ಮದುವೆ ದಿಕ್ಕು ಪೂರ್ತಿ ತಪ್ಪಿದೆ. ಮುಗ್ಧ ಗೌರಿಯ ಜಾಗದಲ್ಲಿ ವಿಕೃತ ಗೌರಿ ಸೇಡಿನಿಂದ ವಿಜೃಂಭಿಸುತ್ತಿದ್ದಾಳೆ. ಇದು ಸಮಾಜಕ್ಕೆ ಒಳ್ಳೆಯ ಸಂದೇಶ ಕೊಡುತ್ತಿಲ್ಲ. ಯಾವ ವಯಸ್ಸಿಗೆ ಏನು ಮರ್ಯಾದೆ ಕೊಡಬೇಕು ಅನ್ನೋ ಯಕಃಚಿತ್ ಜ್ಞಾನವೂ ಅವಳಿಗಿಲ್ಲದಿರುವುದು ವಿಷಾದನೀಯ.

—ಶುಭಾ ಜೈ ಪ್ರಕಾಶ್, ಬೆಂಗಳೂರು

## ಉತ್ತಮ ಕಥೆ

ಸ್ಟಾರ್ ಸುವರ್ಣದಲ್ಲಿ ಮೂಡಿಬರುತ್ತಿರುವ 'ಹರ ಹರ ಮಹಾದೇವ' ಧಾರಾವಾಹಿ ಚೆನ್ನಾಗಿದೆ. ಬರೀ ಗೋಳು, ಅಳು, ಮೋಸ, ಜಗಳಗಳಿಂದ ತುಂಬಿರುವ ಧಾರಾವಾಹಿಗಳನ್ನು ನೋಡಿ ಬೇಜಾರಾಗಿತ್ತು. ಈಗ ಈ ಪೌರಾಣಿಕ ಕಥೆ ಇರುವ ಧಾರಾವಾಹಿ ಮನಸ್ಸಿಗೆ ಮುದ ನೀಡುತ್ತಿದೆ.

—ಎಸ್. ವಿಜಯಕುಮಾರಿ, ಬೆಂಗಳೂರು